

بسم اللهِ الرّحمٰن الرّحيم

# ನೀವು ಅಲ್ಲಾಹನಿಗೆ ಸೇರಿದವರಾಗಿರಿ. ಅದರಿಂದ ಮನಸ್ಸಿಗೆ ಸಮಾಧಾನ ದೊರಕುವುದು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **07-08-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರಿಗೆ ಸಂಬಂಧಿಸಿದ ಘಟನೆಗಳನ್ನು ನಾವು ಓದುವಾಗ ಅಥವಾ ಆಲಿಸುವಾಗ ಅವರ ಒಳ್ಳೆಯ ಪ್ರಕೃತಿ, ಸತ್ಯವನ್ನು ತಿಳಿಯಲು ಅವರಿಗಿದ್ದ ಅಭಿಲಾಷೆ, ಜೀವ ಮತ್ತು ಸಂಪತ್ತು ತ್ಯಾಗ ಮಾಡಲು ಅವರಿಗಿದ್ದ ಉತ್ಸಾಹ ಮತ್ತು ಪ್ರಯತ್ನ, ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅವರಿಗಿದ್ದ ಪ್ರೇಮ, ತಮ್ಮ ಅಭಿರುಚಿ ಮತ್ತು ತಿಳಿವಳಿಕೆ ಪ್ರಕಾರ ಅವುಗಳನ್ನು ಪ್ರಕಟಪಡಿಸಿದ ರೀತಿ, ನಮಗೆ ಗೋಚರಿಸುತ್ತವೆ. ಅವರು ಪವಿತ್ರ ಖುರ್‌ಆನಿನ ವಚನದಲ್ಲಿ ಸೂಚಿಸಲಾದ **ಆಖರೀನ್** ಆಗಿದ್ದರು. ಅವರು ಅವ್ವಲೀನ್ (ಮೊದಲಿನ ಜನ)ರೊಂದಿಗೆ ಸೇರಲು ತಮ್ಮ ತಮ್ಮ ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದವರಾಗಿದ್ದರು. ಪ್ರತಿಯೊಬ್ಬರು ತಮ್ಮದೇ ರೀತಿಯಲ್ಲಿ ವರ್ತಿಸುತ್ತಿದ್ದರು. ಅವರನ್ನು ಕಂಡವರು ಮತ್ತು ಅವರೊಂದಿಗೆ ಸಮೀಪದ ಸಂಬಂಧ ಹೊಂದಿದ್ದವರು ಈ ಸಹಾಬರ ಪ್ರತಿಯೊಂದು ವರ್ತನೆಯ ರೀತಿ, ಗುಣಸ್ವಭಾವಗಳು ಮತ್ತು ಕೆಲಸಗಳಿಂದ ಪ್ರಭಾವಿತರಾಗಿ ತಮ್ಮ ತಮ್ಮ ರೀತಿಗಳಲ್ಲಿ ಉಪದೇಶ ಗ್ರಹಿಸಿದರು. ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಸಹ ಸಹಾಬರೊಂದಿಗೆ ಸೇರಿದವರಾಗಿದ್ದರು. ಅವರಿಗೆ ಸಾಮಾನ್ಯವಾಗಿ ಎಲ್ಲಾ ಸಹಾಬರೊಂದಿಗೆ ಮತ್ತು ಅವರು ಯಾವ ಸಹಾಬರ ಬಗ್ಗೆ ಘಟನೆಗಳನ್ನು ವಿವರಿಸಿರುವರೋ ಅವರೊಂದಿಗೆ ವೈಯಕ್ತಿಕ ಸಂಬಂಧ ಸ್ಥಾಪಿತವಾಗಿತ್ತು. ಅವರು ಸಹಾಬರ ಬಗ್ಗೆ ವಿವರಿಸಿ ಅದರಿಂದ ಉಪದೇಶ ಮಾಡುವಾಗ ಆ ಉಪದೇಶಗಳು ಹೃದಯದ ಮೇಲೆ ವಿಶಿಷ್ಟ ಪ್ರಭಾವ ಬೀರುತ್ತವೆ. ನಾವು ಕೆಲವು ಸಾರಿ ಒಂದು ಘಟನೆಯ ಒಂದು ಪಾರ್ಶ್ವವನ್ನು ಮಾತ್ರ ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಆದರೆ ಗಾಢವಾಗಿ ಯೋಚಿಸಿದರೆ ಅದರ ವಿವಿಧ ಪಾರ್ಶ್ವಗಳು ಕಾಣಿಸುತ್ತವೆ. ಆ ರೀತಿ ಒಂದೇ ಘಟನೆ ವಿವಿಧ ರೀತಿಗಳಲ್ಲಿ ಉಪದೇಶ ನೀಡುವುದಾಗಿರುತ್ತದೆ. ಉದಾಹರಣೆಗೆ ಮೌಲವಿ ಬುರ್‌ಹಾನುದ್ದೀನ್ ಸಾಹೇಬ್ ಜಿಹ್‌ಲಮಿಯವರ ಘಟನೆಯನ್ನು ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತನ್ನದೇ ರೀತಿಯಲ್ಲಿ ಪ್ರಸ್ತಾಪಿಸಿರುವರು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅವರು ಮೊದಲ ಬಾರಿ ಕಂಡದ್ದು ಒಂದು ಸ್ವಾರಸ್ಯಕರ ಘಟನೆ ಆಗಿತ್ತು. ಮೌಲವಿ ಬುರ್‌ಹಾನುದ್ದೀನ್ ಸಾಹೇಬರು ಖಾದಿಯಾನಿಗೆ ಬಂದಾಗ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಗುರುದಾಸಪುರಕ್ಕೆ ಹೋಗಿದ್ದರು. ಆದುದರಿಂದ ಅವರು ಅಲ್ಲಿಗೆ ಹೋದರು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಂಗಿದ್ದ ಮನೆಯ ಒಂದು ದಿಕ್ಕಿನಲ್ಲಿ ಒಂದು ತೋಟವಿತ್ತು. ಹಾಮಿದ್ ಅಲಿ ಬಾಗಿಲ ಬಳಿ ಕುಳಿತಿದ್ದರು. ಅವರು ಮೌಲವಿ ಸಾಹೇಬರಿಗೆ ಮನೆಯೊಳಗೆ ಹೋಗಲು ಅನುಮತಿ ಕೊಡಲಿಲ್ಲ. ಮೌಲವಿ ಸಾಹೇಬರು ಹೇಳುತ್ತಾರೆ– ‘ನಾನು ಬಾಗಿಲ ಬಳಿಗೆ ತಲಪಿ ಮೆಲ್ಲಗೆ ಬಾಗಿಲು ತೆರೆದೆ. ಆಗ ಹಝ್‌ರತ್ ಸಾಹೇಬರು ಉದ್ದ ಹೆಜ್ಜೆ ಹಾಕುತ್ತಾ ಬೇಗ ಬೇಗನೇ ನಡೆಯುತ್ತಿರುವುದನ್ನು ಕಂಡೆನು. ನಾನು ಕೂಡಲೆ ಹಿಂದೆ ಸರಿದೆ. ಈ ವ್ಯಕ್ತಿ ಸತ್ಯವಂತನೆಂದು ನಾನು ಮನವರಿಕೆ ಮಾಡಿದೆ. ಬೇಗ ಬೇಗನೆ ನಡೆಯುತ್ತಾ ಇರುವವನು ಯಾವುದೋ ದೂರದ ಗುರಿಗೆ ತಲಪುವವನಾಗಿದ್ದಾನೆ. ಅದೇ ಕಾರಣದಿಂದ ಬೇಗ ಬೇಗನೆ ನಡೆಯುತ್ತಿದ್ದಾರೆ ಎಂದು ನಾನು ಮನವರಿಕೆ ಮಾಡಿದೆ.’

ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: “ಮೌಲವಿ ಸಾಹೇಬರು ವಹ್ಹಾಬಿಯಾಗಿದ್ದರೂ ಈ ರೀತಿ ಯೋಚಿಸಿದುದು ವಿಚಿತ್ರವೇ ಆಗಿದೆ. ಸಾಮಾನ್ಯವಾಗಿ ವಹ್ಹಾಬಿಗಳು ಒಣ ಸ್ವಭಾವದವರಾಗಿರುತ್ತಾರೆ. ಉಗ್ರವಾದಿಗಳೂ ಆಗಿರುತ್ತಾರೆ. ಆದರೆ ನೋಡಿರಿ ಅಲ್ಲಾಹನು ಹಝ್‌ರತ್ ಮೌಲವಿ ಸಾಹೇಬರು ಸತ್ಯವನ್ನು ಗುರುತಿಸುವಂತೆ ಮಾಡಿದನು. ನೋಡಿರಿ, ಅಲ್ಲಾಹನು ಮೌಲವಿ ಸಾಹೇಬರಿಗೆ ಸತ್ಯವನ್ನು ಪರಿಚಯ ಮಾಡಿಕೊಟ್ಟಾಗ ಅವರು ಪವಿತ್ರ ಖುರ್‌ಆನಿನ ಸಾಕ್ಷ್ಯಾಧಾರ ಕೇಳುವ ಬಗ್ಗೆ ಯೋಚಿಸಲಿಲ್ಲ. ಹದೀಸ್‌ಗಳ ಸಾಕ್ಷ್ಯಾಧಾರವಾಗಲೀ ಬೇರೆ ಯಾವುದಾದರೂ ಸಾಕ್ಷ್ಯಾಧಾರವಾಗಲಿ ತಿಳಿದು ಕೊಳ್ಳುವ ಮನೋಭಾವ ಉಂಟಾಗಲಿಲ್ಲ.” ಹಝ್‌ರತ್ ಮೌಲವಿ ಬುರ್‌ಹಾನುದ್ದೀನ್ ಸಾಹೇಬರ ಶುದ್ಧ ಪ್ರಕೃತಿ, ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವೇಗವಾಗಿ ನಡೆದುದನ್ನೇ ಅವರ ಸತ್ಯತೆಗೆ ಸಾಕ್ಷ್ಯವಾಗಿ ಕಂಡುಕೊಂಡಿತು. ಹಝ್‌ರತ್ ಮೌಲವಿ ಸಾಹೇಬರ ಮೇಲೆ ಅಲ್ಲಾಹನ ವಿಶಿಷ್ಟ ಪ್ರೀತಿಯ ದೃಷ್ಟಿಯಿತ್ತು. ಆದರೆ ಕೆಲವರು ಹೇಗಿರುತ್ತಾರೆಂದರೆ ಸಾಕ್ಷ್ಯಾಧಾರಗಳನ್ನು ಆಲಿಸಿದ ನಂತರವೂ ದೃಷ್ಟಾಂತಗಳನ್ನು ಕಂಡ ನಂತರವೂ ನಂಬುವುದಿಲ್ಲ.

ಎಲ್ಲ ವಹ್ಹಾಬಿಗಳು ಕಠಿಣ ಹೃದಯರಾಗಿರುತ್ತಾರೆ ಎಂದು ಹೇಳುವುದು ಸಹ ಸರಿಯಲ್ಲ. ಆಫ್ರಿಕದಲ್ಲಿ ಸಾವಿರಗಟ್ಟಲೆ ವಹ್ಹಾಬಿಗಳು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿರುವರು. ಮತ್ತು ಬೈಅತ್ ಮಾಡಿರುವರು. ವಹೀ ಮತ್ತು ಇಲ್‌ಹಾಮ್‌ಗಳು ಎಲ್ಲಾ ಸಮಯದಲ್ಲೂ ಆವಶ್ಯಕವಾಗಿವೆ ಎಂದು ಅವರು ಕಂಡುಕೊಂಡರು. ಪ್ರವಾದಿಗಳು ಮತ್ತು ಸಂತರು ಮಳೆಯ

ಹಾಗಿದ್ದಾರೆಂದೂ ಅವರು ಆಗಮಿಸಿದಾಗ ಭೂಮಿ ಹಚ್ಚ ಹಸುರಾಗುತ್ತದೆ ಎಂದೂ ಆಧ್ಯಾತ್ಮಿಕವಾದ ಹಚ್ಚ ಹಸುರು ಗಳಿಸಲು ಇಲ್‌ಹಾಮ್ ಜಾರಿಯಲ್ಲಿರುವುದು ಆವಶ್ಯಕವೆಂದೂ ಅವರು ಮನವರಿಕೆ ಮಾಡಿಕೊಂಡಿದ್ದಾರೆ.

ಇನ್ನೊಂದು ಘಟನೆ ಹಝ್ರತ್ ಸೇಠ್ ಅಬ್ದುರ್ರಹ್ಮಾನ್ ಮದರಾಸೀ ಅವರಿಗೆ ಸಂಬಂಧಿಸಿದ್ದಾಗಿದೆ. ಅವರು ಬಹಳ ನಿಷ್ಠಾವಂತರಾಗಿದ್ದರು. ಬಹಳ ತಬ್ಲೀಗ್ ಮಾಡುತ್ತಿದ್ದರು. ಆರಂಭದಲ್ಲಿ ಅವರ ಆರ್ಥಿಕ ಸ್ಥಿತಿ ಬಹಳ ಚೆನ್ನಾಗಿತ್ತು. ಆಗ ಬಹಳ ತ್ಯಾಗ ಮಾಡುವವರಾಗಿದ್ದರು. ಪ್ರತಿ ತಿಂಗಳು ಮುನ್ನೂರು, ನಾನೂರು, ಐನೂರು ರೂಪಾಯಿ ಚಂದ ಕೊಡುತ್ತಿದ್ದರು. ಆದರೆ ಕೆಲವು ತಪ್ಪು ನಿರ್ಧಾರಗಳ ಕಾರಣ ಅವರ ವ್ಯಾಪಾರ ಪೂರ್ಣವಾಗಿ ನಷ್ಟವಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವರ ಬಗ್ಗೆ ಹೀಗೆ ಇಲ್‌ಹಾಮ್ ಉಂಟಾಗಿತ್ತು.

**ಖಾದಿರ್ ಹೈ ಓ ಬಾರ್‌ಗಾಹ್**

**ಜೋ ಟೂಟಾ ಕಾಮ್ ಬನಾದೇ**

**ಬನಾ ಬನಾಯಾ ತೋಡ್ ದೇ**

**ಕೊಯೀ ಉಸ್‌ಕಾ ಭೇದ್ ನ ಪಾವೇ**

ಅಲ್ಲಾಹನು ಸರ್ವಶಕ್ತನು ಅವನು ಮುರಿದು ಹೋದುದನ್ನು ಸರಿಪಡಿಸುತ್ತಾನೆ. ಸರಿಯಿರುವುದನ್ನು ಮುರಿದು ಹಾಕುತ್ತಾನೆ. ಅವನ ರಹಸ್ಯ ಯಾರಿಗೂ ತಿಳಿಯದು.

ಈ ಇಲ್‌ಹಾಮ್ ಲಭಿಸಿದಾಗ ಮೊದಲ ಚರಣದ ಕಡೆಗೆ ಗಮನಿಸಲಾಯಿತು. ಮತ್ತು ಸೇಠ್ ಸಾಹೇಬರ ವ್ಯಾಪಾರ ಸರಿಯಾಗುವುದೆಂದು ಯೋಚಿಸಲಾಯಿತು. ಎರಡನೆಯ ಚರಣದಲ್ಲಿರುವ ಸೂಚನೆಯ ಕಡೆಗೆ ಯಾರೂ ಗಮನಿಸಲಿಲ್ಲ. ಈ ಇಲ್‌ಹಾಮ್ ಪ್ರಕಾರ ಹಝ್ರತ್ ಸೇಠ್ ಸಾಹೇಬರ ವ್ಯಾಪಾರ ಅಭಿವೃದ್ಧಿಗೊಂಡಿತು. ಅನಂತರ ಅದು ಪುನಃ ಕೆಟ್ಟು ಹೋಯಿತು. ಅವರು ಎಷ್ಟು ಕಷ್ಟಪಟ್ಟರೆಂದರೆ ಆಹಾರಕ್ಕೆ ಸಹ ಅವರ ಬಳಿ ಹಣವಿರಲಿಲ್ಲ. ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅವರ ಬಗ್ಗೆ ವಿಶೇಷ ಪ್ರೇಮ ಭಾವನೆಯಿಂದ ಹೇಳಿದರು: ಹಾಜಿ ಸೇಠ್ ಅಬ್ದುರ್ರಹ್ಮಾನ್ ಅಲ್ಲಾ ರಖ್ಖಾ ಸಾಹೇಬರ ನಿಷ್ಠೆ ಎಷ್ಟು ಹಿರಿದಾಗಿದೆ. ಅವರು ಐನೂರು ರೂಪಾಯಿ ಈಗ ಕಳುಹಿಸಿದ್ದಾರೆ. ಅವರ ಕಷ್ಟ ನೋಡಿ ಒಬ್ಬ ಸ್ನೇಹಿತ ಎರಡು–ಮೂರು ಸಾವಿರ ರೂಪಾಯಿ ಕೊಟ್ಟು ಯಾವುದಾದರೂ ವ್ಯಾಪಾರ ಮಾಡಲು ಹೇಳಿದ್ದರು. ಅಥವಾ ಪಾತ್ರೆಯಂಗಡಿ ತೆರೆಯಲು ಹೇಳಿದ್ದರು. ಅದರಿಂದ ಅವರು ಈ ಹಣ ಕಳುಹಿಸಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸೇಠ್ ಸಾಹೇಬರು ಹೀಗೆ ಬರೆದಿದ್ದರು: "ನಾನು ಚಂದ ಕೊಡದೆ ತುಂಬಾ ಸಮಯ ದಾಟಿ ಹೋಗಿದೆ. ಅಲ್ಲಾಹನು ನನಗೆ ಹಣ ಕಳುಹಿಸಿಕೊಟ್ಟಾಗ ಅದರಿಂದ ದೀನಿಗೋಸ್ಕರ ಸ್ವಲ್ಪ ಕೊಡದಿರಲು ನನ್ನ ಅಭಿಮಾನ ನನ್ನನ್ನು ಅನುಮತಿಸಲಿಲ್ಲ" ಎಂದು ಬರೆದಿದ್ದರು. ಹಝ್ರತ್ ಸೇಠ್ ಸಾಹೇಬರಿಗೆ ದೀನೀ ಸೇವೆ ಬಗ್ಗೆ ಇದ್ದ ಆಸಕ್ತಿ ಬಹಳ ಹೆಚ್ಚಿನದಾಗಿತ್ತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದ ಚಿತ್ರವನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸಿದ್ದಾರೆ: "ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಾನು ವಾಗ್ದತ್ತ ಮಸೀಹ್ ಎಂದೂ ತಾನು ನಬಿ ಮತ್ತು ರಸೂಲ್ ಆಗಿರುವೆನೆಂದೂ ವಾದಿಸಿದರು. ಈ ಸ್ಥಾನ ತನಗೆ ದೊರೆತದ್ದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮನಾದುದರಿಂದ ಹೊರತು ತನ್ನ ಅರ್ಹತೆಯ ಕಾರಣದಿಂದಲ್ಲ ಎಂದು ಸಹ ಹೇಳಿದ್ದರು. ಆದರೆ ಮುಸ್ಲಿಮರಲ್ಲಿ ಬಹುತೇಕ ಜನರು ಅವರ ವಿರುದ್ಧವಾದರು. ಅನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಎಲ್ಲ ಧರ್ಮದ ಜನರಿಗೆ ಪಂಥಾಹ್ವಾನ ನೀಡಿದಾಗ ಕ್ರೈಸ್ತರೂ, ಹಿಂದುಗಳೂ ಸಹ ಅವರ ವಿರೋಧಿಗಳಾದರು. ಮತ್ತು ಅವರನ್ನು ಹೀನೈಸಲು ಪ್ರಯತ್ನ ಮಾಡತೊಡಗಿದರು. ಅವರ ವಿರುದ್ಧ ಅನೇಕ ಮೊಕದ್ದಮೆ ಹೂಡಲಾಯಿತು. ಒಂದು ಮೊಕದ್ದಮೆಯ ವಿಚಾರಣೆಯ ವೇಳೆಯಲ್ಲಿ ಮೂರು ತಿಂಗಳ ಕಾಲ, ಸರಕಾರಿ ರಜಾ ದಿನಗಳ ಹೊರತು ಉಳಿದ ದಿನಗಳಲ್ಲಿ ಪ್ರತಿದಿನ ಅನೇಕ ಗಂಟೆಗಳ ಕಾಲ ನ್ಯಾಯಾಲಯದಲ್ಲಿ ನಿಂತಿರಬೇಕಾಯಿತು. ಒಂದು ದಿನ ಮಾಜಿಸ್ಟ್ರೇಟ್ ತನ್ನ ವಿರೋಧದ ಕಾರಣ ನೀರು ಕುಡಿಯಲು ಸಹ ಅವರಿಗೆ ಅನುಮತಿ ನೀಡಲಿಲ್ಲ. ನಾವು ಈಗ ಈ ವಿಷಯಗಳನ್ನು ಮರೆತು ಬಿಟ್ಟಿದ್ದೇವೆ. ಆದರೆ ಆ ಕಾಲದ ಅಹ್ಮದಿಯರಿಗೆ ಅದೊಂದು ಬಹಳ ಕಠಿಣವಾದ ಪರೀಕ್ಷೆಯ ಕಾಲವಾಗಿತ್ತು. ಒಂದು ಕಡೆ ಅವರು ಹೀಗೆ ಭವಿಷ್ಯವಾಣಿ ಆಲಿಸುತ್ತಿದ್ದರು: **'ಅರಸರು ನಿನ್ನ ಬಟ್ಟೆಗಳಿಂದ ಅನುಗ್ರಹವನ್ನು ಹುಡುಕುವರು' 'ನಿನ್ನನ್ನು ನಂಬದವರು ಲೋಕದಲ್ಲಿ ಕೀಳು ಸಮುದಾಯಗಳ ಹಾಗೆ ಆಗುವರು'** ಎಂದು. ಆದರೆ ಇನ್ನೊಂದು ಕಡೆ ಅವರು ನೋಡುತ್ತಿದ್ದರು ನಾಲ್ಕೈದು ನೂರು ರೂಪಾಯಿ ಮಾತ್ರ ಮಾಸಿಕ ವೇತನ ಪಡೆಯುವ ಮಾಜಿಜಿಸ್ಟ್ರೇಟನೊಬ್ಬ ಅವರನ್ನು ತನ್ನ ಕೋರ್ಟ್‌ನಲ್ಲಿ ನಿಲ್ಲಿಸಿ ನೀರು ಕುಡಿಯಲು ಸಹ ಅನುಮತಿ ನೀಡುವುದಿಲ್ಲ. ಎಲ್ಲಿಯವರೆಗೆಂದರೆ, ಅವರು ನಿಂತು ನಿಂತು ಅವರಿಗೆ ತಲೆ ತಿರುಗುತ್ತಿತ್ತು. ಪಾದ ಬಳಲಿ ಹೋಗುತ್ತಿತ್ತು. ಬಲಹೀನ ವಿಶ್ವಾಸಿಗಳು ಹೀಗೆ ಯೋಚಿಸಿರಬಹುದು– ಅಲ್ಲಾಹನು ಇಷ್ಟೆಲ್ಲಾ ವಾಗ್ದಾನ ಮಾಡಿದ ವ್ಯಕ್ತಿ ಇವರೇನು? ಎಂದು. ಇವುಗಳೆಲ್ಲಾ ಪರೀಕ್ಷೆಗಳಾಗಿದ್ದುವು."

ಈ ಮೊಕದ್ದಮೆಯ ತೀರ್ಮಾನ ಆಗಲಿದ್ದ ದಿನದ ನೆನಪು ನನಗಿದೆ ಎಂದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿ, ಹೀಗೆ ಮುಂದುವರಿಸುತ್ತಾರೆ. "ನಮ್ಮ ಜಮಾಅತಿನಲ್ಲಿ ಪ್ರೊಫೆಸರ್ ಎಂದು ಕರೆಯಲ್ಪಡುತ್ತಿದ್ದ ಒಬ್ಬ ವ್ಯಕ್ತಿ ಇದ್ದರು. ತೀರ್ಪು ನೀಡುವ ಸಮಯವಾದಾಗ ಜನರು ದೃಢವಾಗಿ ನಂಬಿದ್ದರು– ಮೆಜಿಸ್ಟ್ರೇಟ್ ಕಾರಾಗ್ರಹ ವಾಸದ ಶಿಕ್ಷೆ ನೀಡುವರೆಂದು. ಆದರೆ

ದೃಢ ವಿಶ್ವಾಸಿಗಳಾದ ಅಹ್ಮದಿಯರು ಒಂದು ಕ್ಷಣಕಾಲ ಸಹ ಅವರನ್ನು ಬಂಧಿಸಲಾಗುವುದೆಂದು ಯೋಚಿಸುತ್ತಿರಲಿಲ್ಲ. ಆ ದಿನ ನ್ಯಾಯಾಲಯದಲ್ಲಿ ಭದ್ರತೆ ವ್ಯವಸ್ಥೆ ಹೆಚ್ಚಾಗಿ ಮಾಡಲಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೋರ್ಟ್‌ನೊಳಗೆ ಹೋದಾಗ ಪ್ರೊಫೆಸರ್ ಸಾಹೇಬರನ್ನು ನಮ್ಮ ಜನರು ತಡೆದಿರಿಸಿದ್ದರು. ಯಾಕೆಂದರೆ ಅವರು ಬಹಳ ಶೀಘ್ರಕೋಪಿಯಾಗಿದ್ದರು. ಪ್ರೊಫೆಸರ್ ಸಾಹೇಬ್ ಒಂದು ದೊಡ್ಡ ಕಲ್ಲನ್ನು ಒಂದು ಮರದ ಕೆಳಗೆ ಅಡಗಿಸಿಟ್ಟಿದ್ದರು. ಅವರು ಹುಚ್ಚನ ಹಾಗೆ ಬೊಬ್ಬೆ ಹಾಕುತ್ತಾ ಅಳುತ್ತಾ ಕಣ್ಣೀರು ಸುರಿಸುತ್ತಾ ಆ ಕಲ್ಲು ಅಡಗಿಸಿ ಇಟ್ಟ ಮರದ ಸಮೀಪಕ್ಕೆ ಹೋಗಿ ಕಲ್ಲನ್ನು ಎತ್ತಿಕೊಂಡು ನ್ಯಾಯಾಲಯದ ಕಡೆಗೆ ಓಡಿ ಬಂದರು. ಜಮಾಅತಿನ ಜನರು ಅವರನ್ನು ತಡೆಯದೆ ಇರುತ್ತಿದ್ದರೆ ಮೆಜಿಸ್ಟ್ರೇಟ್‌ನ ತಲೆಗೆ ಅದನ್ನು ಎಸೆಯುತ್ತಿದ್ದರು. ಕಾರಣ ಮೆಜಿಸ್ಟ್ರೇಟ್ ನಿಶ್ಚಯವಾಗಿಯೂ ಶಿಕ್ಷೆ ನೀಡುವರೆಂದು ಅವರು ಯೋಚಿಸಿದ್ದರು. ಇದೇ ಯೋಚನೆಯಲ್ಲಿ ಅವರು ಮೆಜಿಸ್ಟ್ರೇಟನಿಗೆ ಕಲ್ಲೆಸೆಯಲು ಸಿದ್ಧರಾದರು.''

ಇಂತಹ ಪರಿಸ್ಥಿತಿಯಲ್ಲಿ ಕೆಲವರು ಹೀಗೆ ವರ್ತಿಸುತ್ತಾರೆ. ಆದರೆ ಬಲಹೀನ ವಿಶ್ವಾಸಿಗಳು ಮುರ್‌ತದ್ದ್ (ಧರ್ಮತ್ಯಾಗಿ) ಆಗುತ್ತಾರೆ. ನಿಷ್ಠಾವಂತರ ವಿಶ್ವಾಸ ವರ್ಧಿಸುತ್ತದೆ. ಆದರೆ ಬಹಳ ಉದ್ವೇಗಭರಿತರಾದವರು ಪ್ರೊಫೆಸರ್ ಸಾಹೇಬರ ಹಾಗೆ ಕೋಪೋದ್ರೇಕಗೊಂಡು ಸ್ವತಃ ಪ್ರತೀಕಾರ ಮಾಡಲು ಮುಂದುವರಿಯುತ್ತಾರೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳು ಮತ್ತು ತರಬೇತಿ ನಮ್ಮ ನಡೆವಳಿಕೆಗಳಿಗೆ ಉತ್ತಮ ಮಾರ್ಗದರ್ಶಿಯಾಗಿವೆ. ಅದು ನಮ್ಮ ಕಾರ್ಯಕ್ರಮಗಳ ಸೂಚಿಯಾಗಿದೆ. ಅವುಗಳನ್ನು ನಾವು ಯಾವಾಗಲೂ ನೆನಪಿನಲ್ಲಿಡಬೇಕು. ನಾವು ಯಾವಾಗಲೂ ಸಹನೆಯಿಂದಲೂ ಧೈರ್ಯದಿಂದಲೂ ವರ್ತಿಸಬೇಕು. ಅಂತಿಮವಾಗಿ ಅಲ್ಲಾಹನು ನೀಡಿದ ಸಮಾಚಾರಗಳ ಪ್ರಕಾರವೇ ಸಂಭವಿಸುವುದು. ಸಹನೆ ಮತ್ತು ದುಆ ಮೂಲಕ ನಾವು ಅವುಗಳ ದೃಶ್ಯಗಳನ್ನು ಕಾಣುವೆವು – ಇನ್‌ಶಾಅಲ್ಲಾಹ್.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಬ್ಬ ವ್ಯಕ್ತಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವರಿಗೆ ರಮಝಾನ್ ತಿಂಗಳ ಉಪವಾಸದ ಸೆಹ್‌ರಿಯ ಬಗ್ಗೆ ಸ್ವಂತ ಅಭಿಪ್ರಾಯವಿತ್ತು. ಅಲ್ಲಾಹನು ಅವರಿಗೆ ಮಾರ್ಗದರ್ಶನ ನೀಡಿದ್ದು ಸಹ ವಿಚಿತ್ರವಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ನಮ್ಮ ಜಮಾಅತಿನಲ್ಲಿ ಒಬ್ಬರಿದ್ದರು. ಅವರನ್ನು ಜನರು ಫಿಲಾಸಫರ್ ಎಂದು ಕರೆಯುತ್ತಿದ್ದರು. ಅವರಿಗೆ ಉಪಕಥೆಗಳು ಬಹಳ ಗೊತ್ತಿದ್ದುವು. ಅವುಗಳಲ್ಲಿ ಕೆಲವು ಬಹಳ ಒಳ್ಳೆಯದಾಗಿದ್ದುವು. ಅವರು ಮಾತನಾಡುವಾಗ ಪ್ರತಿ ವಿಷಯಕ್ಕೆ ಸಂಬಂಧಿಸಿ ಒಂದು ಹೊಸ ಅಂಶವನ್ನು ಪ್ರಸ್ತಾಪಿಸುತ್ತಿದ್ದ ಕಾರಣದಿಂದಲೇ ಅವರನ್ನು ಫಿಲಾಸಫರ್ ಎಂದು ಕರೆಯಲಾಗುತ್ತಿತ್ತು. ಒಮ್ಮೆ ಉಪವಾಸದ ಬಗ್ಗೆ ಚರ್ಚೆ ನಡೆದಾಗ ಅವರು ಹೇಳಿದರು: ಮೌಲವಿಗಳು ಮತ್ತು ಫಿಖ್‌ಹ್ ಪಂಡಿತರು ಅಸಂಬದ್ಧವಾಗಿ ಹೇಳುತ್ತಾರೆ– ಸೆಹ್ರಿ ಉಣ್ಣುವುದು ಸ್ವಲ್ಪ ತಡವಾದರೆ ಉಪವಾಸ ಸಿಂಧುವಾಗುವುದಿಲ್ಲ ಎಂದು. ಹನ್ನೆರಡು ಗಂಟೆ ಹಸಿದಿರುವವನು ಐದು ನಿಮಿಷ ತಡವಾಗಿ ಸೆಹ್ರಿ ಉಂಡರೆ ಏನು ತೊಂದರೆ? ಮೌಲವಿಗಳು ಥಟ್ಟನೆ ಫತ್ವ ನೀಡುತ್ತಾರೆ ಅವನ ಉಪವಾಸ ಕೆಟ್ಟುಹೋಯಿತೆಂದು. ಫಿಲಾಸಫರ್ ಇದರ ಬಗ್ಗೆ ಬಹಳ ವಾಗ್ವಾದ ಮಾಡಿದರು. ಮರುದಿನ ಬೆಳಿಗ್ಗೆ ಬಹಳ ಗಾಬರಿಯಿಂದ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಸಮೀಪ ಬಂದರು. ಅದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಕಾಲವಾಗಿತ್ತು. ಆದರೆ ದರ್ಸ್ ಮೊದಲಾದವುಗಳನ್ನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ನೀಡುತ್ತಿದ್ದರು. ಆದುದರಿಂದ ಅವರಿದ್ದ ಸಭೆಗೆ ಜನರು ಹೆಚ್ಚಾಗಿ ಆಗಮಿಸುತ್ತಿದ್ದರು. ಫಿಲಾಸಫರ್ ಸಾಹೇಬ್ ಬಂದ ಕೂಡಲೆ ಹೇಳಿದರು– ಕಳೆದ ರಾತ್ರಿ ನನಗೆ ಬಹಳ ದೊಡ್ಡ ಎಚ್ಚರಿಕೆ ಲಭಿಸಿದೆ. ಹಝ್ರತ್ ಖಲೀಫತುಲ್ ಮಸೀಹ್ ಕೇಳಿದರು: ಏನಾಯಿತು? ಆಗ ಫಿಲಾಸಫರ್ ಸಾಹೇಬ್ ಹೀಗೆ ಹೇಳಿದರು– ನಾನು ವಾದಿಸುತ್ತಿದ್ದೆ ಮೌಲವಿಗಳು ಅಸಂಬದ್ಧವಾಗಿ ಹೇಳುತ್ತಾರೆ. ಸೆಹ್ರಿ ಸ್ವಲ್ಪ ತಡವಾಗಿ ಉಂಡರೆ ಉಪವಾಸ ಆಗುವುದಿಲ್ಲ ಎಂದು. ನಾನು ಹೇಳಿದೆ– ಹನ್ನೆರಡು ಅಥವಾ ಹದಿನಾಲ್ಕು ಗಂಟೆ ಉಪವಾಸ ಮಾಡುವವನು ಸೆಹ್ರಿ ಸ್ವಲ್ಪ ತಡವಾಗಿ ಉಂಡರೆ ತೊಂದರೆ ಏನೆಂದು. ಈ ವಾಗ್ವಾದದ ನಂತರ ನಾನು ನಿದ್ರಿಸಿದೆ. ನಾನು ಒಂದು ಸ್ವಪ್ನ ಕಂಡೆನು. ನೂಲನ್ನು ತೆಗೆದುಕೊಂಡು ನಾನು ಅದರ ಒಂದು ತುದಿಯನ್ನು ಒಂದು ಮೊಳೆಗೆ ಕಟ್ಟಿದೆ. ಇನ್ನೊಂದು ಮೊಳೆಗೆ ಇನ್ನೊಂದು ತುದಿ ಕಟ್ಟಲು ಹೋದೆನು. ಆದರೆ ಇನ್ನೊಂದು ಮೊಳೆಗೆ ತಲಪಲು ಎರಡು ಬೆರಳಿನ ಅಗಲದ ಅಂತರವಿರುವಾಗ ಆ ನೂಲು ಮುಗಿಯಿತು. ನಾನು ಪದೇ ಪದೇ ನೂಲನ್ನು ಎಳೆದು ಕಟ್ಟಲು ಪ್ರಯತ್ನಿಸಿದೆ. ಆದರೆ ಸಾಧ್ಯವಾಗಲಿಲ್ಲ. ಆಗ ನನ್ನ ನೂಲು ಮಣ್ಣಿಗೆ ಬಿದ್ದು ಹಾಳಾಯಿತು. ನಾನು ಕನಸಿನಲ್ಲೇ ಬೊಬ್ಬೆ ಹೊಡೆದೆ ನನ್ನ ಸಹಾಯಕ್ಕೆ ಬನ್ನಿರಿ ಎಂದು. ಎರಡು ಬೆರಳಿನಷ್ಟು ಉದ್ದ ಕಡಿಮೆಯಾದ ಕಾರಣ ನನ್ನ ನೂಲು ಹಾಳಾಯಿತು ಎಂದು. ನಾನು ಬೊಬ್ಬೆ ಹೊಡೆಯುತ್ತಾ ಇದ್ದಾಗ ನನಗೆ ಎಚ್ಚರವಾಯಿತು. ನಾನು ಎಚ್ಚೆತ್ತಾಗ ನನಗೆ ತಿಳಿಯಿತು. ಈ ಸ್ವಪ್ನದ ಮೂಲಕ ಅಲ್ಲಾಹನು ನನಗೆ ಹೀಗೆ ತಿಳಿಸಿದನು. ಎರಡು ಬೆರಳಿನಷ್ಟು ಉದ್ದ ಕಮ್ಮಿಯಾಗುವಾಗ ನೂಲು ಹಾಳಾಗುವುದಾದರೆ ಐದು ಮಿನಿಟು ತಡವಾಗಿ ಸೆಹ್ರಿ ಉಣ್ಣುವಾಗ ಉಪವಾಸ ಪೂರ್ಣವಾಗುವುದು ಹೇಗೆ.''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಬ್ಬ ಸೂಫಿಯ ಪಂಜಾಬಿ ಭಾಷೆಯ ಹೇಳಿಕೆಯನ್ನು ಆಗಾಗ ಪ್ರಸ್ತಾಪಿಸುತ್ತಿದ್ದರು. ಅದು ಹೀಗೆ: ಲೋಕದ ಜೀವಿತ ಹೇಗೆ ಇದೆ ಎಂದರೆ ನೀನು ಯಾರಿಗಾದರೂ ಸೇರಿದವನಾಗಬೇಕು ಅಥವಾ ಯಾರಾದರೂ ನಿನಗೆ ಸೇರಿದವನಾಗಬೇಕು. ಅಲ್ಲಾಹನು ಇದೇ ವಿಷಯದ ಬಗ್ಗೆ ಹೀಗೆ ಹೇಳಿದ್ದಾನೆ: **ಖಲಖಲ್ ಇನ್‌ಸಾನ ಮಿನ್ ಅಲಖ್** ಮನುಷ್ಯನ

ಪ್ರಕೃತಿಯಲ್ಲಿ ಅಲ್ಲಾಹನು ಎಂತಹ ಗುಣವನ್ನು ಇರಿಸಿದ್ದಾನೆಂದರೆ ಅವನು ಯಾರಾದರೊಬ್ಬನ ಆಸರೆಯನ್ನು ಬಯಸುತ್ತಾನೆ. ಹಾಗೆ ಮಾಡದಿದ್ದರೆ ಅವನ ಹೃದಯಕ್ಕೆ ಸಮಾಧಾನ ದೊರಕಲಾರದು. ಆದರೆ ಉತ್ತಮವಾದುದು ಅಲ್ಲಾಹನಿಗೆ ಸೇರಿದವನಾಗುವುದೇ ಆಗಿದೆ. ಅದರ ಮೂಲಕ ಧಾರ್ಮಿಕ ಮತ್ತು ಲೌಕಿಕ ಲಾಭಗಳು ಸಹ ದೊರಕುತ್ತವೆ. ಆದುದರಿಂದ ಮನುಷ್ಯನು ಅದಕ್ಕೋಸ್ಕರ ಪ್ರಯತ್ನಿಸಬೇಕು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತನ್ನ ಒಬ್ಬ ಅಧ್ಯಾಪಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೊಂದಿದ್ದ ಪ್ರೇಮದ ಬಗ್ಗೆ ಹೀಗೆ ವಿವರಿಸುತ್ತಾರೆ: "ನನ್ನ ಒಬ್ಬ ಅಧ್ಯಾಪಕ ಮೌಲವಿ ಯಾರ್ ಮುಹಮ್ಮದ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಎಷ್ಟು ಪ್ರೀತಿಸುತ್ತಿದ್ದರೆಂದರೆ ಕೆಲವು ಸಾರಿ ಅವರು ಹುಚ್ಚನಂತೆ ಆಗುತ್ತಿದ್ದರು. ಅವರು ಅವರ ಭವಿಷ್ಯವಾಣಿಗಳನ್ನು ತನ್ನದೆಂದು ಹೇಳುತ್ತಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಮೀಪವಾಗಿರಲು ಏನೆಲ್ಲಾ ಮಾಡುತ್ತಿದ್ದರು. ನಮಾಝ್ ಮಾಡುವಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶರೀರದ ಮೇಲೆ ತನ್ನ ಕೈ ಸವರಲು ಪ್ರಯತ್ನಿಸುತ್ತಿದ್ದರು. ಕೆಲವು ಸಾರಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಆ ವ್ಯಕ್ತಿ ಅರೆಹುಚ್ಚಿನಿಂದ ತನ್ನ ಹಿಂದೆ ಬಂದು ಕುಳಿತುಕೊಳ್ಳದಂತೆ ನೋಡಬೇಕೆಂದು ಜನರನ್ನು ನೇಮಿಸಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಾತನಾಡುವಾಗ ತನ್ನ ಕೈ ಎತ್ತಿ ಬೀಸಿಕೊಂಡು ತನ್ನ ತೊಡೆಯ ಕಡೆಗೆ ತರುತ್ತಿದ್ದರು. ಇದನ್ನು ನೋಡಿ ಮೌಲವಿ ಯಾರ್ ಮುಹಮ್ಮದ್ ಪ್ರೀತಿಯ ಉತ್ಸಾಹದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಮೀಪಕ್ಕೆ ನೆಗೆದು ಹೋಗುತ್ತಿದ್ದರು. ಅವರೊಂದಿಗೆ ಕೇಳಿದಾಗ ಅವರು ಹೇಳುತ್ತಿದ್ದರು– ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಂಜ್ಞೆ ಮೂಲಕ ನನ್ನನ್ನು ಕರೆದರು ಎಂದು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಇದು ಹುಚ್ಚು ಮತ್ತು ಪ್ರೇಮದ ಸ್ಥಿತಿಯಾಗಿದೆ. ತನಗೆ ಪ್ರಿಯರಾದವರು ಉದ್ದೇಶಪೂರ್ವಕವಾಗಿ ಕೈ ಚಲಾಯಿಸದಿದ್ದರೂ ಅದು ತನ್ನನ್ನು ಕರೆಯಲು ಮಾಡಿದ ಸಂಜ್ಞೆ ಎಂದು ಅವರು ಭಾವಿಸುತ್ತಾರೆ. ಆದರೆ ನಮ್ಮ ಸ್ಥಿತಿ ಏನು? ನಾವು ಅಲ್ಲಾಹನನ್ನು ಪ್ರೀತಿಸುತ್ತೇವೆ ಎಂದು ಹೇಳುತ್ತೇವೆ. ಆದರೆ ಅಲ್ಲಾಹನು 'ನಮಾಝ್ ಕಡೆಗೆ ಬನ್ನಿರಿ, ವಿಜಯದ ಕಡೆಗೆ ಬನ್ನಿರಿ' ಎಂದು ಸ್ಪಷ್ಟವಾಗಿ ನಮ್ಮನ್ನು ಕರೆಯುತ್ತಿದ್ದರೂ ನಾವು ನಮಾಝ್ ಅನುಷ್ಠಿಸಲು ಓಡಿಹೋಗುವುದಿಲ್ಲ. ಮತ್ತು ಜುಮುಅಕ್ಕೆ ಹೋಗಲು ನಾವು ಸಾಕಷ್ಟು ಶ್ರದ್ಧೆ ವಹಿಸುವುದಿಲ್ಲ."

ಈ ವಿಷಯದ ಕಡೆಗೆ ಪ್ರತಿಯೊಬ್ಬ ಅಹ್ಮದಿ ಗಮನ ಹರಿಸಬೇಕಾಗಿದೆ. ಅಲ್ಲಾಹನ ಸ್ಪಷ್ಟವಾದ ಕರೆಗೆ ಓಗೊಟ್ಟು ಈ ಆವೇಶಭರಿತ ಪ್ರೇಮಿಯ ಹಾಗೆ ಓಡಿಹೋಗಿ ಮಸ್‌ಜಿದ್‌ಗಳನ್ನು ಜನಭರಿತವನ್ನಾಗಿ ಮಾಡಲು ಪ್ರಯತ್ನಿಸಬೇಕಾಗಿದೆ. ಈಗ ರಜಾ ಕಾಲವಾಗಿದೆ. ಮಕ್ಕಳು ತಮ್ಮ ತಂದೆ ತಾಯಂದಿರೊಂದಿಗೆ ಮಸ್‌ಜಿದ್‌ಗೆ ಆಗಮಿಸುತ್ತಾರೆ. ಆದರೆ ನಂತರ ಆಲಸ್ಯ ಬಂದುಬಿಡುತ್ತದೆ. ಹಾಗಾಗದಂತೆ ಪ್ರಯತ್ನಿಸಬೇಕಾಗಿದೆ.

--------------*****--------------


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 07-08-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon